**ಓಎಸ್.120/2022**
**ಪಿ.ಡಬ್ಲ್ಯೂ-1**

**<u>ದಿನಾಂಕಃ 25-10-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ</u>- ಪ್ರತಿವಾದಿ ಪರವಾಗಿ ಶ್ರೀ.ಜಿ.ಎಸ್.ಆರ್. ವಕೀಲರಿಂದಃ-**

ನನಗೆ ಶಾಮಲಾ ದೇವಿ, ಟಿ.ಜ್ಯೋತಿಶ್ರಿ ಮತ್ತು ಕಾಂಚನ ಎಂಬ ಸಹೋದರಿಯರಿದ್ದಾರೆ. ಶಾಮಲಾ ದೇವಿ ತೀರಿ ಹೋಗಿದ್ದಾರೆ. ಶಾಮಲಾ ದೇವಿಯವರಿಗೆ ಮಕ್ಕಳಿಲ್ಲ ಗಂಡ ಬದುಕಿದ್ದಾರೆ. ಈ ದಾವೆಯಲ್ಲಿ ಶಾಮಲಾ ದೇವಿಯವರ ಗಂಡನನ್ನು ಪಕ್ಷ ಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ಜ್ಯೋತಿಶ್ರಿರವರು ತೀರಿ ಹೋಗಿದ್ದಾರೆ. ನನ್ನ ಮತ್ತು ನನ್ನ ಸಹೋದರಿಯರ ಮದುವೆಯನ್ನು 1 ನೇ ಪ್ರತಿವಾದಿಯೇ ಮಾಡಿರುತ್ತಾರೆ. ಮದುವೆಯಾಗುವ ಕಾಲಕ್ಕೆ ನನಗೆ 30 ವರ್ಷವಾಗಿತ್ತು. 1988 ರಲ್ಲಿ ನನ್ನ ಮದುವೆ ಆಗಿರುತ್ತದೆ. ನನ್ನ ಮಗನಿಗೆ ಈಗ 31 ವರ್ಷ ಮಗಳಿಗೆ 22 ವರ್ಷ ವಯಸ್ಸು . ನನ್ನ ಮದುವೆ ಆಗುವ ಕಾಲಕ್ಕೆ ನನ್ನ ತಂದೆ ತಾಯಿ ಇಬ್ಬರು ಇದ್ದರು. 1 ನೇ ಪ್ರತಿವಾದಿ ಕೊ-ಆಪರೇಟಿವ್ ಸೊಸೈಟಿಯಲ್ಲಿ ಕಾರ್ಯದರ್ಶಿಯಾಗಿ ಕೆಲಸ ಮಾಡುತಿದ್ದರು. ನನ್ನ ಮದುವೆಯಾದ 2 ವರ್ಷಕ್ಕೆ 1 ನೇ ಪ್ರತಿವಾದಿಯ ಮದುವೆಯಾಗಿರುತ್ತದೆ.

1 ನೇ ಪ್ರತಿವಾದಿ ಮದುವೆಯಾದ ನಂತರ ಬೇರೆಯಾಗಿ ವಾಸವಾಗಿದ್ದರು ಎಂದರೆ ಸರಿ. 1 ನೇ ಪ್ರತಿವಾದಿ ಎಲ್ಲೆಲ್ಲಿ ಕೆಲಸ ನಿರ್ವಹಿಸುತಿದ್ದರೋ ಅಲ್ಲಿ ಅವರ ಸಂಸಾರ ಸಮೇತ ವಾಸವಾಗಿದ್ದರು ಎಂದರೆ ಸರಿ. ಜ್ಯೋತಿಶ್ರಿ ಮದುವೆಯಾಗಿ 30 ವರ್ಷವಾಗಿರಬಹುದು. 3 ನೇ ಪ್ರತಿವಾದಿಗೆ ಮದುವೆಯಾಗಿಲ್ಲ. ನನ್ನ ತಂದೆ ತೀರಿ ಹೋಗಿ ಸುಮಾರು 15 ವರ್ಷ ಆಗಿರಬಹುದು. ನಾನು ಬಿ.ಎ. ಪದವಿಯನ್ನು ಪೂರ್ಣ ಗೊಳಿಸಿಲ್ಲ. ನನ್ನ ತಂದೆ 2004 ರಲ್ಲಿ ತೀರಿ ಹೋಗಿದ್ದಾರೆ ಎಂದರೆ ಸರಿ. ನನ್ನ ತಂದೆ ಸೊಸೈಟಿಯಲ್ಲಿ ಲೆಕ್ಕ ಬರೆಯುತಿದ್ದರು ಆಮೇಲೆ ಸೊಸೈಟಿಯಲ್ಲಿ 1 ನೇ ಪ್ರತಿವಾದಿಗೆ ಕೆಲಸ ಕೊಡಿಸಿರುತ್ತಾರೆ. 1 ನೇ ಪ್ರತಿವಾದಿಗೆ ಸುಮಾರು 23

ವರ್ಷವಿದ್ದಾಗ ಕೆಲಸಕ್ಕೆ ಸೇರಿಕೊಂಡಿರುತ್ತಾರೆ. 1 ನೇ ಪ್ರತಿವಾದಿ ಕೆಲಸಕ್ಕೆಂದು ಬೇರೆ ಬೇರೆ ಕಡೆ ಹೋದಾಗ ನಮ್ಮ ಮನೆಯಲ್ಲಿ ತಂದೆ, ತಾಯಿ, ಹೆಣ್ಣು ಮಕ್ಕಳು ವಾಸವಾಗಿದ್ದೆವು. ಮನೆಯ ಯಜಮಾನಿಕೆಯನ್ನು ನನ್ನ ತಂದೆಯವರೇ ನೋಡಿಕೊಳ್ಳುತಿದ್ದರು. ನನ್ನ ತಂದೆ ಪಿ.ಯು.ಸಿ. ವರೆಗೆ ವ್ಯಾಸಂಗ ಮಾಡಿದ್ದರು.

ಮದುವೆ ಕಾಲಕ್ಕೆ 1 ಜೊತೆ ಓಲೆ ಅಷ್ಟೆ ಕೊಟ್ಟಿದ್ದರು. ಮದುವೆ ಕಾಲಕ್ಕೆ ನನಗೆ ಬಂಗಾರದ ಮಾಂಗಲ್ಯ ಸರ, 1 ಜೊತೆ ಬಂಗಾರದ ಬಳೆ, ಬಂಗಾರದ ಉಂಗುರ ಮತ್ತು ಬೆಲೆ ಬಾಳುವ ಸೀರೆ ಕೊಟ್ಟು ಅದ್ದೂರಿಯಾಗಿ ಮದುವೆ ಮಾಡಿಕೊಟ್ಟಿದ್ದು ಎಂದರೆ ಸರಿಯಲ್ಲ. ಮದುವೆ ಖರ್ಚನ್ನು ನನ್ನ ತಂದೆಯವರೆ ಬರಿಸಿದ್ದರು ಎಂದರೆ ಸರಿಯಲ್ಲ. ಅದೇ ರೀತಿ ನನ್ನ ತಂಗಿಯಂದಿರಿಗೂ ಸಹ ಮೇಲೆ ಹೇಳಿದಂತೆ ಬಂಗಾರದ ಒಡವೆ ಕೊಟ್ಟು, ಬೆಲೆ ಬಾಳುವ ಸೀರೆ ಕೊಟ್ಟು ಅದ್ದೂರಿಯಾಗಿ ಮದುವೆ ಮಾಡಿಕೊಟ್ಟಿದ್ದರು ಎಂದರೆ ಸರಿಯಲ್ಲ. ನನ್ನ ತಂದೆ ಬೆಂಗಳೂರು ಮತ್ತು ದಾವಣಗೆರೆಯಲ್ಲಿ ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ಕೆಲಸ ಮಾಡುತಿದ್ದರು. ನನ್ನ ಮತ್ತು ನನ್ನ ಸಹೋದರಿಯರ ಮದುವೆ ಮಾಡಲು ನನ್ನ ತಂದೆ ತುಂಬಾ ಕಡೆ ಸಾಲ ಮಾಡಿದ್ದರು ಎಂದರೆ ಸರಿಯಲ್ಲ.

ತಂದೆ ಮಾಡಿದ ಸಾಲದ ಬದ್ದತೆಗಾಗಿ 1 ನೇ ಪ್ರತಿವಾದಿ ದಾವಾ ಐಟಂ.ನಂ.1 ರ ಜಮೀನನ್ನು ನಾಮಕಾವಸ್ತೆ ನೊಂದಣಿ ಕ್ರಯ ಪತ್ರ ಮಾಡಿಕೊಟ್ಟಿದ್ದರು ಎಂದರೆ ಸರಿಯಲ್ಲ. ದಾವಾ ಐಟಂ.ನಂ.1 ರಲ್ಲಿ ನನ್ನ ಸಹೋದರಿಯರಿಗೂ ಸಹ ಭಾಗ ಇದೆ ಎಂದರೆ ಸರಿ. 4 ನೇ ಪ್ರತಿವಾದಿಯಿಂದ 8 ಲಕ್ಷ ಹಣವನ್ನು ಪಡೆದು ದಾವಾ ಐಟಂ.ನಂ.1 ರಲ್ಲಿ ನನಗೆ ಇರುವ ಹಕ್ಕನ್ನು ಬಿಟ್ಟು ಕೊಟ್ಟಿದ್ದೇನೆ. ನನ್ನ ಸಹೋದರಿಯರು ಸಹ ದಾವಾ ಐಟಂ.ನಂ.1 ಕ್ಕೆ ಸಂಬಂದಪಟ್ಟಂತೆ ಹಣ ಪಡೆದು ಅವರ ಹಕ್ಕನ್ನು ಬಿಟ್ಟು ಕೊಟ್ಟಿದ್ದಾರೆ. 1 ನೇ ಪ್ರತಿವಾದಿ 4 ನೇ ಪ್ರತಿವಾದಿಯ ಹೆಸರಿಗೆ ನಿಜವಾದ ಕ್ರಯಪತ್ರವನ್ನು ಮಾಡಿಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾನು ಹಣ

ಪಡೆಯುತಿದ್ದರಿಂದ ದಾವಾ ಐಟಂ.ನಂ.1 ಸ.ನಂ.66/14 ರಲ್ಲಿ ಇರುವ 1 ನೇ ಪ್ರತಿವಾದಿಯ ಹಕ್ಕಿಗೆ ತೊಂದರೆಯಾಗುತ್ತದೆ ಎಂದರೆ ಸರಿಯಲ್ಲ.

ನನ್ನ ತಂದೆ ಮಾಡಿರುವ ಸಾಲ ಈಗಲೂ ಸಹ ಇದ್ದು ಆ ಸಾಲ ತೀರಿಸುವ ಭಾದ್ಯತೆ ನನಗೂ ಇದೆ ಎಂದರೆ ಸರಿಯಲ್ಲ. ಮನೆಯ ಯಜಮಾನಿಕೆಯನ್ನು 1 ನೇ ಪ್ರತಿವಾದಿ ಮಾಡಿಲ್ಲ ನನ್ನ ತಂದೆ ಯಜಮಾನಿಕೆ ಮಾಡುತಿದ್ದರು ಎಂದರೆ ಸರಿಯಲ್ಲ. ದಾವಾ ಆಸ್ತಿನ್ನು 1 ನೇ ಪ್ರತಿವಾದಿ ನೋಡಿಕೊಳ್ಳುತ್ತಿರಲಿಲ್ಲ ನನ್ನ ತಂದೆಯೇ ದಾವಾ ಆಸ್ತಿಯನ್ನು ನೋಡಿಕೊಳ್ಳುತಿದ್ದರು ಮತ್ತು ಅದರ ಆದಾಯವನ್ನು ಅವರೇ ತೆಗೆದುಕೊಳ್ಳುತಿದ್ದರು ಎಂದರೆ ಸರಿಯಲ್ಲ. ಭಾಗ ಕೊಡಿ ಎಂದು 1 ನೇ ಪ್ರತಿವಾದಿಯನ್ನು ನಾನು ಕೇಳಿಲ್ಲ ಸ್ವತಃ ಮುಂದುವರೆದು ಹೇಳುತ್ತಾರೆ, 4 ನೇ ಪ್ರತಿವಾದಿಗೆ ದಾವಾ ಐಟಂ.ನಂ.1 ನ್ನು ಮಾರಿದ ನಂತರ ನಾನು ಕೇಸ್ ಹಾಕಿದ್ದೇನೆ. 4 ನೇ ಪ್ರತಿವಾದಿ ನಮ್ಮ ಮನೆಯ ಹತ್ತಿರ ಬಂದು ಗಲಾಟೆ ಮಾಡಿಲ್ಲ.

ಈ ಹಂತದಲ್ಲಿ ವಕೀಲರ ವಿನಂತಿ ಮೇರೆಗೆ ಮುಂದುವರಿದ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ಗಣಕೀಕೃತಗೊಳಿಸಲಾಯಿತು)

ಓ.ಹೇ.ಸಾ.ಸ.ಇ.ಒ.

ಸಹಿ/-

ಅಧಿಕ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆಎಂಎಫ್‌ಸಿ, ಮಧುಗಿರಿ